**12-3-2023**
**UDAYAVANI - MANIPAL**

# ಕೆಎಂಸಿ: ವೈಲ್ಡರ್ನೆಸ್ ಮೆಡಿಸಿನ್ ಕಾನ್ಫರೆನ್ಸ್

**ಮಣಿಪಾಲ, ಮಾ. 11:** ಕೆಎಂಸಿ ಮತ್ತು ಆಸ್ಪತ್ರೆಯ ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಮತ್ತು ತುರ್ತು ಚಿಕಿತ್ಸಾ ವಿಭಾಗ, ವೈಲ್ಡರ್ನೆಸ್ ಮೆಡಿಸಿನ್ ಸೆಂಟರ್ ವತಿಯಿಂದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡಾ। ಟಿಎಂಎ ಪೈ ಸಭಾಂಗಣದಲ್ಲಿ ವೈಲ್ಡರ್ನೆಸ್ ಮೆಡಿಸಿನ್ ಸಮ್ಮೇಳನ ನಡೆಯಿತು.



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಹಾರಾಷ್ಟ್ರದ ಡಾ। ಹಿಮ್ಮತ್‌ರಾವ್ ಸಲೂಬಾ ಬಾವಸ್ಕರ್ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿ, ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವೀಧರರು ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸ ಮಾಡುವ ವೈದ್ಯರಿಗೆ ಜೀವ ಉಳಿಸುವಲ್ಲಿ ಆಸ್ಪತ್ರೆಯ ಪೂರ್ವ ವೃತ್ತಿಪರರ ಪಾತ್ರವನ್ನು ವಿವರಿಸಿದರು.

ಮಾಹೆ ವಿ.ವಿ. ಸಹ ಕುಲಪತಿ ಡಾ। ಶರತ್ ಕುಮಾರ್ ರಾವ್ ಮಾತನಾಡಿ, ಮಣಿಪಾಲವು ಒಂದು ಕಡೆ ಸಮುದ್ರ, ಇನ್ನೊಂದು ಕಡೆ ಪಶ್ಚಿಮ ಘಟ್ಟಗಳಿಂದ ಸುತ್ತುವರಿದಿದೆ. ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಭವಿಷ್ಯದಲ್ಲಿ ಮತ್ತಷ್ಟು ಬೆಳೆಯಲಿದೆ. ಇದು ಪ್ರದೇಶದ ಅಗತ್ಯಗಳನ್ನು ಪೂರೈಸಲಿದೆ. ಸಮುದ್ರ ಮತ್ತು ಅರಣ್ಯ ಇರುವ ಕಠಿಣ ಪರಿಸರದಲ್ಲಿ ವೈದ್ಯಕೀಯ ನೆರವು ನೀಡುವುದು ಸುಲಭವಲ್ಲ ಎಂದು ವೈಲ್ಡರ್ನೆಸ್ ಮೆಡಿಸಿನ್ ಪ್ರಸ್ತುತತೆಯ ಬಗ್ಗೆ ತಿಳಿಸಿದರು.

ಕೆಎಂಸಿ ಡೀನ್ ಡಾ। ಪದ್ಮರಾಜ್ ಹೆಗ್ಡೆ, ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ। ಆನಂದ್ ವೇಣುಗೋಪಾಲ್, ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ, ಅಂತಾರಾಷ್ಟ್ರೀಯ ವ್ಯವಹಾರಗಳ ನಿರ್ದೇಶಕ ಡಾ। ಕರುಣಾಕರ್ ಕೋಟೆಗಾರ್, ಕೆಎಂಸಿ ಸಹ ಡೀನ್ ಡಾ। ಕೃಷ್ಣಾನಂದ ಪ್ರಭು, ಡಾ। ಪ್ರಮೋದಿನಿ ಬಾವಸ್ಕರ್, ಸ್ಕೂಬಾ ಎವಲ್ಯೂಷನ್ ಗೋವಾದ ವಿಶ್ವನಾಥ್ ರಾಜನ್ ಉಪಸ್ಥಿತರಿದ್ದರು.

ಕೆಎಂಸಿ ತುರ್ತು ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ। ಜಯರಾಜ್ ಮೈಂಬಿಳ್ಳಿ ಬಾಲಕೃಷ್ಣನ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ। ಫ್ರೆಸ್ಟನ್ ಅವರು ಕೇಂದ್ರದ ಚಟುವಟಿಕೆ ಸೇರಿದಂತೆ ಆರೋಗ್ಯ ಮತ್ತು ಸಂರಕ್ಷಣೆ, ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳಾದ ಅರಣ್ಯ ಜೀವನಕ್ಕೆ ಬೆಂಬಲ, ಡೈವ್ ಮೆಡಿಸಿನ್, ಶೋಧನೆ, ರೆಸ್ಕ್ಯೂ ತರಬೇತಿ ಕುರಿತು ಮಾಹಿತಿ ನೀಡಿದರು. ಸಹ ಪ್ರಾಧ್ಯಾಪಕ ಡಾ। ವಿಮಲ್ ಕೃಷ್ಣನ್ ಎಸ್. ವಂದಿಸಿದರು.

ವಿಷಯ ತಜ್ಞರು ಮಿಂಚು ಹಾಗೂ ಸಿಡಿಲು, ಹೈಮನೋಪ್ಟೆರಾನ್ ಎನ್ವಿನೋಮೇಷನ್‌ಗಳು, ಪ್ರಾಣಿಗಳ ದಾಳಿ, ಚೇಳು ಕುಟುಕು, ಗುಹೆ ಡೈವಿಂಗ್, ಹಾವು ಕಡಿತ, ವೈದ್ಯಕೀಯ ಕಿಟ್ ಮತ್ತು ಅರಣ್ಯವಾಸಿಗಳ ಬದುಕಿನ ಚಿತ್ರಣ, ಅರಣ್ಯ ಔಷಧ ಸಿಮ್ಯುಲೇಶನ್ ಅನುಭವಕ್ಕಾಗಿ ಅರಣ್ಯ ಸಂಚಾರವೂ ಸಮ್ಮೇಳನದ ಭಾಗವಾಗಿತ್ತು. ಶೈಕ್ಷಣಿಕ ಸಂಸ್ಥೆಯಲ್ಲಿ ಇಂತಹ ಸಮ್ಮೇಳನ ನಡೆಯುವುದು ಇದೇ ಮೊದಲು. 200ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ಕಾರ್ಯಾಗಾರಕ್ಕೆ 60 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಜಾ ವಾಣಿ
ಭಾನುವಾರ • ಮಾರ್ಚ್ 12, 2023

ಮಣಿಪಾಲದ ಕೆಎಂಸಿಯಿಂದ ಕಾರ್ಯಕ್ರಮ ಆಯೋಜನೆ

# ‘ವೈಲ್ಡರ್ನೆಸ್ ಮೆಡಿಸಿನ್ ಕರಾವಳಿಗೆ ಅಗತ್ಯ’

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡಾ.ಟಿಎಂಎ ಪೈ ಸಭಾಂಗಣದಲ್ಲಿ ವೈಲ್ಡರ್ನೆಸ್ ಮೆಡಿಸಿನ್ ಸೆಂಟರ್ ಮತ್ತು ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಮತ್ತು ತುರ್ತು ಚಿಕಿತ್ಸಾ ವಿಭಾಗದ ವತಿಯಿಂದ ವೈಲ್ಡರ್ನೆಸ್ ಮೆಡಿಸಿನ್ ಸಮ್ಮೇಳನ ನಡೆಯಿತು.

ಮಾಹೆ ಸಹ ಕುಲಪತಿ ಡಾ.ಶರತ್ ಕುಮಾರ್ ರಾವ್ ಮಾತನಾಡಿ, ಒಂದೆಡೆ ಸಮುದ್ರ ಮತ್ತು ಮತ್ತೊಂದು ಕಡೆ ಪಶ್ಚಿಮ ಘಟ್ಟಗಳಿಂದ ಸುತ್ತುವರಿದಿರುವ ಮಣಿಪಾಲವು ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಭವಿಷ್ಯದಲ್ಲಿ ಬಹಳ ಎತ್ತರಕ್ಕೆ ಬೆಳೆಯುವ ವಿಶ್ವಾಸವಿದೆ. ವೈಲ್ಡರ್ನೆಸ್ ಕ್ಷೇತ್ರವು ಈ ಭಾಗದ ಅಗತ್ಯಗಳನ್ನು ಪೂರೈಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಸಮುದ್ರ ಮತ್ತು ಕಾಡುಗಳಂತಹ ಕಠಿಣ ಪರಿಸರದಲ್ಲಿ ವೈದ್ಯಕೀಯ ನೆರವು ನೀಡುವುದು ಸುಲಭದ ಮಾತಲ್ಲ. ವೈಲ್ಡರ್ನೆಸ್ ಮೆಡಿಸನ್ ಇದಕ್ಕೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯ ಪಟ್ಟರು.

ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಪದ್ಮರಾಜ್ ಹೆಗ್ಡೆ, ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಸಿಒಒ ಡಾ.ಆನಂದ್ ವೇಣುಗೋಪಾಲ್, ಕೆಎಂಸಿ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಅಂತರ ರಾಷ್ಟ್ರೀಯ ವ್ಯವಹಾರಗಳ ನಿರ್ದೇಶಕ ಡಾ.ಕರುಣಾಕರ್ ಕೋಟೆಗಾರ್, ಕೆಎಂಸಿ ಸಹ ಡೀನ್ ಡಾ.ಕೃಷ್ಣಾನಂದ ಪ್ರಭು, ಡಾ.ಪ್ರಮೋದಿನಿ ಬಾವಸ್ಕರ್, ಸ್ಕೂಬಾ ಎವಲ್ಯೂಷನ್ ಗೋವಾದ ವಿಶ್ವನಾಥ್ ರಾಜನ್ ಇದ್ದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಮಹಾರಾಷ್ಟ್ರದ ಡಾ.ಹಿಮ್ಮತ್‌ರಾವ್ ಸಲೂಬಾ ಬಾವಸ್ಕರ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ ಅರಣ್ಯ ಅನುಭವಗಳನ್ನು ತೆರೆದಿಟ್ಟರು. ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವೀಧರರು ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸ ಮಾಡುವ ವೈದ್ಯರಿಗೆ ರೋಗಿಗಳ ಜೀವ ಉಳಿಸುವಲ್ಲಿ ವೃತ್ತಿಪರತೆಯ ಮಹತ್ವವನ್ನು ವಿವರಿಸಿದರು.

ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯದ ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಜಯರಾಜ್ ಮೈಂಬಿಳ್ಳಿ ಬಾಲಕೃಷ್ಣನ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಫ್ರೆಸ್ಸನ್ ಕೇಂದ್ರದ ಚಟುವಟಿಕೆ, ಆರೋಗ್ಯ ಮತ್ತು ಸಂರಕ್ಷಣೆ, ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮ, ಡೈವ್ ಮೆಡಿಸಿನ್, ಶೋಧನೆ ಮತ್ತು ರಕ್ಷಣಾ ತರಬೇತಿ ಕುರಿತು ಅವಲೋಕನ ನೀಡಿದರು. ಸಹ ಪ್ರಾಧ್ಯಾಪಕ ಡಾ.ವಿಮಲ್ ಕೃಷ್ಣನ್ ಎಸ್ ವಂದಿಸಿದರು.

ಸಮ್ಮೇಳನದ ಮೊದಲನೆಯ ದಿನ ಪರಿಣಿತ ತಜ್ಞರು ಮಿಂಚು ಹಾಗೂ ಸಿಡಿಲು, ‘ಹೈಮನೋಪ್ಟೆರಾನ್ ಎನ್ವಿನೋಮೇಷನ್‌ಗಳು, ಪ್ರಾಣಿಗಳ ದಾಳಿ, ಚೇಳುಕಡಿತ, ಗುಹೆ ಡೈವಿಂಗ್ ಮತ್ತು ಹಾವು ಕಡಿತಗಳ ಕುರಿತು ಮಾತನಾಡಿದರು. ಸಮ್ಮೇಳನದಲ್ಲಿ ಭಾಗವಹಿಸಿದವರನ್ನು ಅರಣ್ಯ ಔಷಧ ಸಿಮ್ಯುಲೇಶನ್ ಅನುಭವಕ್ಕಾಗಿ ಸಮೀಪದ ಅರಣ್ಯಕ್ಕೆ ಕರೆದೊಯ್ಯಲಾಯಿತು. ಸಮ್ಮೇಳನದಲ್ಲಿ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

**ಮುಖ್ಯಾಂಶಗಳು**

- ‘ವೈಲ್ಡರ್ನೆಸ್ ಕ್ಷೇತ್ರವು ಈ ಭಾಗದ ಅಗತ್ಯಗಳನ್ನು ಪೂರೈಸಲಿದೆ’
- ‘ಕಾಡುಗಳಂತಹ ಪರಿಸರದಲ್ಲಿ ವೈದ್ಯಕೀಯ ನೆರವು ನೀಡುವುದು ಸುಲಭದ ಮಾತಲ್ಲ’



ಮಣಿಪಾಲ ಕಸ್ತೂರಬಾ ವೈದ್ಯಕೀಯ ಕಾಲೇಜಿನ ಡಾ.ಟಿಎಂಎ ಪೈ ಸಭಾಂಗಣದಲ್ಲಿ ವೈಲ್ಡರ್ನೆಸ್ ಮೆಡಿಸಿನ್ ಸೆಂಟರ್ ಮತ್ತು ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಮತ್ತು ತುರ್ತು ಚಿಕಿತ್ಸಾ ವಿಭಾಗದ ವತಿಯಿಂದ ವೈಲ್ಡರ್ನೆಸ್ ಮೆಡಿಸಿನ್ ಸಮ್ಮೇಳನ ನಡೆಯಿತು

THE CANARA POST

# KMC brings together medical professionals for Wilderness Medicine Conference




**Manipal, March 11, 2023:** The Centre for Wilderness Medicine and Department of Emergency Medicine at Kasturba Medical College, Manipal, organized the first-ever Wilderness Medicine Conference at Dr. TMA Pai Hall in Manipal.

Dr. Sharath Kumar Rao, Pro Vice-Chancellor (Health Sciences) MAHE, Manipal was the chief guest of the program who praised the efforts of the organizers and emphasized the importance of Wilderness Medicine, particularly in Manipal, which is surrounded by the sea on one side and the Western Ghats on the other.

He expressed his hope for the Centre for Wilderness Medicine to grow and cater to the needs of the region, especially in austere environments where medical aid is difficult to provide.

The keynote speaker for the conference was Padma Shri awardee, Dr. Himmatrao Saluba Bawaskar, a renowned physician from Maharashtra known for his practice-changing work on scorpion stings.

Dr. Bawaskar spoke briefly about his wilderness experiences and emphasized the importance of these topics for undergraduates, postgraduates, and doctors working in primary healthcare settings.

Other notable guests included Dr. Padmaraj Hegde, Dean of Kasturba Medical College, Manipal, Dr. Anand Venugopal, COO of Teaching Hospitals, MAHE, Manipal, Dr. Avinash Shetty, Medical Superintendent of Kasturba Hospital, Manipal, Dr. Karunakar Kotegar, Director of International Affairs, Dr. Krishnanandha Prabhu, Associate Dean of KMC Manipal, Dr. Pramodini Bawaskar, and Cdr. Vishwanath Rajan from Scuba Evolution Goa.

On the first day, experts conducted sessions on various topics like lightning strikes, hymenopteran envenomations, animal attacks, scorpion stings, cave diving, and snake bites. The second day featured a wilderness medicine workshop that included a practical demo of setting up a medical kit for an expedition and wilderness survival equipment. Participants were taken to the nearby jungle for a wilderness medicine simulation challenge.

Dr. Jayaraj Mymbilly Balakrishnan, Professor and Head, Department of Emergency Medicine, Kasturba Medical College, Manipal welcomed the gathering. Dr.Freston, Assistant Professor from the department gave a brief overview of the center's activities including health & conservation, research, and training programs like wilderness life support, dive medicine, and search & Rescue training. Dr. Vimal Krishnan S, Associate Professor from the department proposed the vote of thanks.

The conference and workshop were well received by over 200 delegates for the conference and 60-plus participants for the workshop.

ಹಾಯ್ ಕರಾವಳಿ

ಕರಾವಳಿ

# ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಮತ್ತು ತುರ್ತುಚಿಕಿತ್ಸಾ ವಿಭಾಗ, ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ , ಮಣಿಪಾಲದಿಂದ ವೈಲ್ಡರ್ನೆಸ್ ಮೆಡಿಸಿನ್ ಕಾನ್ಫರೆನ್ಸ್ 2023




ಮಣಿಪಾಲ, 11ನೇ ಮಾರ್ಚ್ 2023: ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡಾ ಟಿಎಂಎ ಪೈ ಸಭಾಂಗಣದಲ್ಲಿ ವೈಲ್ಡರ್ನೆಸ್ ಮೆಡಿಸಿನ್ ಸೆಂಟರ್ ಮತ್ತು ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಮತ್ತು ತುರ್ತುಚಿಕಿತ್ಸಾ ವಿಭಾಗ, ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಣಿಪಾಲ ಇವರಿಂದ ನಡೆಯಿತು. ವೈಲ್ಡರ್ನೆಸ್ ಮೆಡಿಸಿನ್ ಕಾನ್ಫರೆನ್ಸ್ , ಶೈಕ್ಷಣಿಕ ಸಂಸ್ಥೆಯಲ್ಲಿ ಈ ರೀತಿಯ ಸಮ್ಮೇಳನ ಮೊದಲನೆಯದು.

ಡಾ. ಶರತ್ ಕುಮಾರ್ ರಾವ್, ಸಹ ಕುಲಪತಿಗಳು (ಆರೋಗ್ಯ ವಿಜ್ಞಾನ) ಮಾಹೆ , ಮಣಿಪಾಲ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. ಅವರು ಸಮ್ಮೇಳನದ ಪ್ರಯತ್ನವನ್ನು ಶ್ಲಾಘಿಸಿದರು ಮತ್ತು ವೈಲ್ಡರ್ನೆಸ್ ಮೆಡಿಸಿನ್ ಪ್ರಸ್ತುತತೆಯ ಬಗ್ಗೆ ಮಾತನಾಡಿದರು, ವಿಶೇಷವಾಗಿ ಮಣಿಪಾಲವು ಒಂದು ಕಡೆ ಸಮುದ್ರ ಮತ್ತು ಇನ್ನೊಂದು ಕಡೆ ಪಶ್ಚಿಮ ಘಟ್ಟಗಳಿಂದ ಸುತ್ತುವರಿದಿದೆ. ಸೆಂಟರ್ ಫಾರ್ ವೈಲ್ಡರ್ನೆಸ್ ಮೆಡಿಸಿನ್ ಭವಿಷ್ಯದಲ್ಲಿ ಮತ್ತಷ್ಟು ಬೆಳೆಯಲಿದೆ ಮತ್ತು ಇದು ಪ್ರದೇಶದ ಅಗತ್ಯಗಳನ್ನು ಪೂರೈಸಲಿದೆ ಎಂದು ಅವರು ಭರವಸೆ ವ್ಯಕ್ತಪಡಿಸಿದರು, ವಿಶೇಷವಾಗಿ ಸಮುದ್ರ ಮತ್ತು ಕಾಡುಗಳಂತಹ ಕಠಿಣ ಪರಿಸರದಲ್ಲಿ ವೈದ್ಯಕೀಯ ನೆರವು ನೀಡುವುದು ಸುಲಭದ ಮಾತಲ್ಲ ಎಂದು ಅಭಿಪ್ರಾಯ ಪಟ್ಟರು.ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ಡೀನ್ ಡಾ.ಪದ್ಮರಾಜ್ ಹೆಗ್ಡೆ, ಮಾಹೆ ಮಣಿಪಾಲದ ಭೋದನಾ ಆಸ್ಪತ್ರೆಗಳ ಸಿಒಒ ಡಾ ಆನಂದ್ ವೇಣುಗೋಪಾಲ್, ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಅಂತಾರಾಷ್ಟ್ರೀಯ ವ್ಯವಹಾರಗಳ ನಿರ್ದೇಶಕ ಡಾ.ಕರುಣಾಕರ್ ಕೋಟೆಗಾರ್, ಕೆಎಂಸಿ ಮಣಿಪಾಲದ ಸಹ ಡೀನ್ ಡಾ.ಕೃಷ್ಣಾನಂದ ಪ್ರಭು, ಡಾ.ಪ್ರಮೋದಿನಿ ಬಾವಸ್ಕರ್, ಸ್ಕೂಬಾ ಎವಲ್ಯೂಷನ್ ಗೋವಾದ ವಿಶ್ವನಾಥ್ ರಾಜನ್ ಉಪಸ್ಥಿತರಿದ್ದರು.

ಮಹಾರಾಷ್ಟ್ರದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಹಿಮ್ಮತ್ರಾವ್ ಸಲೂಬಾ ಬಾವಸ್ಕರ್ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಇವರು ಚೇಳು ಕುಟುಕುವಂತಹ ಅಭ್ಯಾಸ-ಬದಲಾವಣೆ ಕೆಲಸಕ್ಕೆ ಹೆಸರುವಾಸಿಯಾಗಿದ್ದಾರೆ. ಬಾವಸ್ಕರ್ ಅವರು ತಮ್ಮ ಅರಣ್ಯ ಅನುಭವಗಳ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದರು ಮತ್ತು ಈ ವಿಷಯಗಳ ಪ್ರಾಮುಖ್ಯತೆಯನ್ನು ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವೀಧರರು ಮತ್ತು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸ ಮಾಡುವ ವೈದ್ಯರಿಗೆ ಜೀವ ಉಳಿಸುವಲ್ಲಿ ಆಸ್ಪತ್ರೆಯ ಪೂರ್ವ ವೃತ್ತಿಪರರ ಪಾತ್ರವನ್ನು ಒತ್ತಿ ಹೇಳಿದರು.

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯದ ತುರ್ತು ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ.ಜಯರಾಜ್ ಮೈಂಬಿಳ್ಳಿ ಬಾಲಕೃಷ್ಣನ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಫ್ರೆಸ್ಟನ್ ಅವರು ಕೇಂದ್ರದ ಚಟುವಟಿಕೆ ಸೇರಿದಂತೆ ಆರೋಗ್ಯ ಮತ್ತು ಸಂರಕ್ಷಣೆ, ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳಾದ ಅರಣ್ಯ ಜೀವನಕ್ಕೆ ಬೆಂಬಲ, ಡೈವ್ ಮೆಡಿಸಿನ್ ಮತ್ತು ಶೋಧನೆ ಮತ್ತುರೆಸ್ಕ್ಯೂ ತರಬೇತಿ ಕುರಿತು ಸಂಕ್ಷಿಪ್ತ ಅವಲೋಕನವನ್ನು ನೀಡಿದರು. ಸಹ ಪ್ರಾಧ್ಯಾಪಕ ಡಾ.ವಿಮಲ್ ಕೃಷ್ಣನ್ ಎಸ್ ವಂದಿಸಿದರು.

ಸಮ್ಮೇಳನದ ಮೊದಲನೇ ದಿನ ಪರಿಣಿತ ತಜ್ಞರು ಮಿಂಚು ಹಾಗೂ ಸಿಡಿಲು , ಹೈಮನೋಪ್ಟೆರಾನ್ ಎನ್ವಿನೋಮೇಷನ್‌ಗಳು, ಪ್ರಾಣಿಗಳ ದಾಳಿ, ಚೇಳು ಕುಟುಕು, ಗುಹೆ ಡೈವಿಂಗ್ ಮತ್ತು ಹಾವು ಕಡಿತಗಳು ಕುರಿತು ಮಾತನಾಡಿದರು.

ಎರಡನೇ ದಿನದ ಕಾರ್ಯಾಗಾರವು ಬೆಳಿಗ್ಗೆ ವೈದ್ಯಕೀಯ ಕಿಟ್ ಮತ್ತು ಅರಣ್ಯವಾಸಿಗಳ ಬದುಕುಳಿಯುವ ಸಾಧನದ ಪ್ರಾಯೋಗಿಕ ಡೆಮೊವನ್ನು ಒಳಗೊಂಡಿತ್ತು, ಮಧ್ಯಾಹ್ನ ಸಮ್ಮೇಳನದಲ್ಲಿ ಭಾಗವಹಿಸಿದವರನ್ನು ಅರಣ್ಯ ಔಷಧ ಸಿಮ್ಯುಲೇಶನ್ ಅನುಭವಕ್ಕಾಗಿ ಸಮೀಪದ ಅರಣ್ಯಕ್ಕೆ ಕರೆದೊಯ್ಯಲಾಯಿತು.

ಸಮ್ಮೇಳನದಲ್ಲಿ 200 ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ಕಾರ್ಯಾಗಾರಕ್ಕೆ 60 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು .

*ವೈದ್ಯಕೀಯ ಅಧೀಕ್ಷಕರು*

UDUPI BULLETIN

BONOBO



# ಮಣಿಪಾಲ: ವೆಲ್ನೆಸ್ ಮೆಡಿಸಿನ್ ಕಾನ್ಫರೆನ್ಸ್

By Udupi Bulletin News Desk

